ಹಿಡಿದಿಡಿದು ನೀರಲ್ಲಿ ಮುಳುಗಿಸಿ ಬಲವಂತದ ಸ್ನಾನ ಮಾಡಿಸಬೇಕಿತ್ತು. ಅವು ಎಲ್ಲರಂತೆ ಎದ್ದು ಓಡಾಡದೆ ಮಣ್ಣಿನಲ್ಲಿ ಗುಂಡಿ ಕೊರೆದುಕೊಂಡು ಕೊರ್ರ್ ಕೊರ್ರ್ ಎಂದು ಗುರುಗುಟ್ಟುತ್ತಾ ಬಾಣಂತನದ ಭಂಗಿಯಲ್ಲಿ ಕೂರುತ್ತಿದ್ದವು. ಈ ಹಟಮಾರಿತನವನ್ನು ಬಿಡಿಸಲು ದಿನಕ್ಕೆ ಎರಡು ಮೂರು ಸಲ ತಣ್ಣೀರಲ್ಲಿ ಕಡ್ಡಾಯ ಮಜ್ಜನ ಅವುಗಳಿಗೆ ಮಾಡಿಸಲೇಬೇಕಿತ್ತು. ಇವುಗಳ ಮೊಟ್ಟೆಗಳ ಮೇಲೆ ರಾಣಿ ತನ್ನ ತಳ ಸ್ಥಾಪಿಸಿಕೊಂಡು ತಪಸ್ಸಿಗೆ ಕೂತಿರುತ್ತಿದ್ದಳು. ತಮ್ಮ ಪಿಂಡ ಕಳೆದುಕೊಂಡ ಇವು ಸಂಕಟಪಡುತ್ತಾ ಒದ್ದಾಡುತ್ತಿದ್ದವು. ಒಂದು ವಾರದ ತನಕ ಹಿಡಿದಿಟ್ಟು ಬಲವಂತದ ಸ್ನಾನ ಮಾಡಿಸಿದ ಮೇಲೆ ಬಾಣಂತನ ಮರೆಯುತ್ತಿದ್ದ ಮೊಟ್ಟೆ ಇಟ್ಟ ಹ್ಯಾಟೆಗಳು ನಂತರ ಹುಂಜನ ಸುತ್ತ ಸುತ್ತಾಡುತ್ತಿದ್ದವು. ಎಲ್ಲಾ ಪ್ರೇಯಸಿಯರನ್ನೂ ಕರೆದುಕೊಂಡು ರಾಜಗಾಂಭೀರ್ಯದಿಂದ ಹನಿಮೂನ್ ಟ್ರಿಪ್ ನಡೆಸುತ್ತಿದ್ದ ಹುಂಜಪ್ಪನ ಗತ್ತು, ಗಾಂಭೀರ್ಯಗಳನ್ನು ನೋಡಿ ನಮಗೆಲ್ಲಾ ಹೊಟ್ಟೆ ಕಿಚ್ಚಾಗುತ್ತಿತ್ತು. ಮುಂದಿನ ಜನ್ಮ ಅನ್ನೋದಿದ್ದರೆ ಹುಂಜವಾಗಿ ಹುಟ್ಟಿ ಅನೇಕ ಹ್ಯಾಟೆಗಳ ಜೊತೆ ಬಿಂದಾಸಾಗಿ ಓಡಾಡಬೇಕೆಂಬ ಆಸೆ ಅದ್ಯಾಕೋ ಈಗಲೂ ಉಳಿದುಹೋಗಿದೆ. ಹುಂಜಪ್ಪನ ದರ್ಬಾರ್ ಒಮ್ಮೆ ನೀವೂ ನೋಡಿದ್ದರೆ ನಿಮಗೂ ಈ ಆಸೆ ಮೂಡದಿರದು.

ಕೋಳಿ ಹಾಗೂ ಬಾತುಗಳು ಮೊಟ್ಟೆ ಇಡುವ ರೀತಿಯೂ ಸೋಜಿಗದ್ದಾಗಿತ್ತು. ಕೋಳಿಗಳು ಬುಟ್ಟಿ ಓರೆ ಮಾಡಿಟ್ಟ ನಿಗದಿತ ಜಾಗಕ್ಕೇ ಬಂದು ತತ್ತಿ ಇಡುತ್ತಿದ್ದವು. ಆದರೆ ಬಾತುಗಳು ಬಹಳಷ್ಟು ಸಲ ನಲ್ಲಿ ನೀರು ಹರಿದು ಹೋಗಿ ಕೆಸರಾದ ಜೊಂಡಿನ ಜಾಗದ ಪೊದೆಯಲ್ಲಿ ತತ್ತಿ ಇಟ್ಟಿರುತ್ತಿದ್ದವು. ಅವನ್ನು ಹುಡುಕಿ ಹೆಕ್ಕಿ ತರುವುದು ಬಲು ತ್ರಾಸಿನ ಕೆಲಸವೆನಿಸುತ್ತಿತ್ತು. ಒಮ್ಮೊಮ್ಮೆ ಕೆಲ ಕ್ರಾಕ್ ಕೋಳಿಗಳಂತೂ ಮನೆ ಹಿತ್ತಲ ಬೇಲಿಯ ಸಂದಿ ಮೂಲೆಗಳಲ್ಲಿ ಮೊಟ್ಟೆ ಮಡಗುತ್ತಿದ್ದವು. ಒಂದು ಸಲವಂತೂ ಒಂದು ಹ್ಯಾಟೆ ಎಂಟು ತತ್ತಿಗಳನ್ನು ಲಂಟಾನದ

